# ರಾಮಾಯಣ ದರ್ಶನಂ ಕನ್ನಡದ ಮಹಾಕಾವ್ಯ

**ಡಾ. ಜಿ. ರವಿ, ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜಪುರ ಬೆಂಗಳೂರು.**

**ಪೀಠಿಕೆ**

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಾಕಾವ್ಯಗಳು ಹುಟ್ಟುವುದಿಲ್ಲ. ಅದರ ಕಾಲ ಇನ್ನು ಮುಗಿಯಿತು ಎನ್ನುವಷ್ಟರಲ್ಲಿ ಕುವೆಂಪು ಅವರು 'ಶ್ರೀರಾಮಾಯಣ ದರ್ಶನಂ' ಎಂಬ ಮಹತ್ತಾದ ಮಹಾಕಾವ್ಯವನ್ನು ರಚಿಸಿದರು. ಭರತಖಂಡದ ಜನಮನದಲ್ಲಿ ಹಾಸುಹೊಕ್ಕಾಗಿರುವ ಕಾವ್ಯ ರಾಮಾಯಣ. ಒಂದಲ್ಲ ಒಂದು ರೂಪದಲ್ಲಿ ಅದರ ಕಥೆ ಭಾರತೀಯರಲ್ಲಿ ಎಲ್ಲರಿಗೂ ಗೊತ್ತಿರುವಂಥದೇ. ಆದ್ದರಿಂದ ರಾಮಾಯಣದ ಕಥೆಯನ್ನು ಆಧಾರವಾಗಿಟ್ಟುಕೊಂಡು ಒಂದು ದೊಡ್ಡ ಕಾವ್ಯವನ್ನು ಬರೆಯಬೇಕು ಎಂಬ ಭಾವನೆ ಪುಟ್ಟಪ್ಪನವರ ಮನಸ್ಸಿನಲ್ಲಿ ತುಂಬ ಚಿಕ್ಕಂದಿನಲ್ಲಿಯೇ ಮೊಳೆತಂತೆ ಕಾಣುತ್ತದೆ. ಅವರ ಸುಪ್ತ ಮನಸ್ಸು ತಡಕುತ್ತಿದ್ದುದನ್ನು ಎಚ್ಚೆತ್ತ ಮನಸ್ಸು 1936ರಲ್ಲಿ, ಹತ್ತು ವರ್ಷಗಳ ಅನಂತರ ಕಂಡುಕೊಂಡಿತು. ಶ್ರೀ ರಾಮಾಯಣ ದರ್ಶನಂ ರಚನೆ ಪ್ರಾರಂಭವಾಗಿ ಸುಮಾರು ಒಂಬತ್ತು ವರ್ಷಗಳ ರಸತಪಸ್ಸು ನಡೆದು 1946ರಲ್ಲಿ ಕೃತಿರಚನೆ ಪೂರ್ಣಗೊಂಡಿತು.

ಇಪ್ಪತ್ತನೆಯ ಶತಮಾನದಲ್ಲಿ ಒಂದು ಮಹಾಕಾವ್ಯವನ್ನು ಕುವೆಂಪು ರಚಿಸುವ ಆವಶ್ಯಕತೆ ಏನಿತ್ತು? ಒಂದೊಂದು ಯುಗಕ್ಕೂ ತಾನು ಹೇಳಬೇಕಾದ ಹೊಸ ವಿಷಯ, ಸಾರಬೇಕಾದ ಹೊಸ ಸಂದೇಶ ಇರುತ್ತದೆ. ವಾಲ್ಮೀಕಿ ಮಹರ್ಷಿಗಳು ರಾಮಾಯಣವನ್ನು ರಚಿಸಿ ಮೂರು ಸಾವಿರ ವರ್ಷಗಳಾಗಿವೆ ಎಂದು ಇಟ್ಟುಕೊಳ್ಳೋಣ. ಈ ಮೂರು ಸಾವಿರ ವರ್ಷಗಳಲ್ಲಿ ಧರ್ಮ, ಸಂಸ್ಕೃತಿ, ನಾಗರಿಕತೆ, ವಿಜ್ಞಾನ ಇವುಗಳಲ್ಲಿ ಎಷ್ಟು ಪ್ರಗತಿಯಾಗಿದೆ ! ಬುದ್ಧ, ಏಸುಕ್ರಿಸ್ತ, ರಾಮಕೃಷ್ಣ ಪರಮಹಂಸರು, ಮಹರ್ಷಿ ಅರವಿಂದರು ಮುಂತಾದ ದಾರ್ಶನಿಕರು; ಗ್ರೀಕ್ ರೋಮನ್ ಭಾರತೀಯ ಚಿತ್ರ ಶಿಲ್ಪಗಳು; ಹರಪ್ಪ ಮೊಹೆಂಜೋದಾರೋ ಸಿಂಧೂ ಸಂಸ್ಕೃತಿಗಳು; ಚಂದ್ರ ಸೂರ್ಯ ಭೂಮಿ ಇತ್ಯಾದಿ ಗ್ರಹಗಳನ್ನು ಅಳೆದು ತೂಗಿದ್ದು, ಅಣುವನ್ನು ಸಿಡಿಸಿದ್ದು ಮುಂತಾದ ವೈಜ್ಞಾನಿಕ ಸಿದ್ಧಿಗಳು; ಹೋಮರ್, ಡಾಂಟೆ, ಷೇಕ್ಸ್‌ಪಿಯರ್, ಮಿಲ್ಟನ್, ಕಾಳಿದಾಸ ಕವಿಗಳ ಸಾಹಿತ್ಯ ಸೃಷ್ಟಿ, ಒಂದೇ ಎರಡೇ ಈ ಜಗತ್ತು ಕಂಡ ಅದ್ಭುತಗಳ ಪರಂಪರೆ ! ಜೊತೆಗೆ ನಮ್ಮ ಸಮಕಾಲೀನರಾಗಿದ್ದು ಸ್ವಾತಂತ್ರ್ಯ ಹೋರಾಟ ನಡೆಸಿ ವಿಜಯಿಗಳಾದ ಸಂತ ರಾಜಕಾರಣಿ ಮಹಾತ್ಮ ಗಾಂಧಿಯವರು ತೆರೆದ ದಾರಿ, ನೀಡಿದ ಸಂದೇಶ ಇವು ಕೂಡ ಸಾಮಾನ್ಯವಾದುವೆ? ಸಮಾಜದ ಅತ್ಯಂತ ಕೆಳ ವರ್ಗದ ಜನತೆಯನ್ನು ಮೇಲೆತ್ತುವ ಮಹಾ ಸಾಹಸವನ್ನು ಮಾಡಲು ಅವರ ನಡುವೆಯೇ ಮೂಡಿ ಬಂದ ಮಹಾನ್ ವ್ಯಕ್ತಿ ಡಾ. ಅಂಬೇಡ್ಕರ್‌ರವರ ಸಾಧನೆ ಸಿದ್ಧಿಗಳು–ಇವೆಲ್ಲವನ್ನೂ, ಜೊತೆಗೆ ಇಂದಿನ ಜಗತ್ತಿನ ನಾಗರಿಕ ಸಂಸ್ಕೃತಿಗಳನ್ನು ಅನುಭವವನ್ನಾಗಿ ಪರಿವರ್ತಿಸಿಕೊಂಡು ಅಭಿವ್ಯಕ್ತಿ ನೀಡಲು ಮಹಾಕಾವ್ಯವೊಂದರ ಮಾಧ್ಯಮ ಬೇಡವೆ? ಇದಕ್ಕೆ ತಕ್ಕ ಸಿದ್ಧತೆಯನ್ನು ಪಡೆದುಕೊಂಡಿದ್ದ ಕವಿ ಕುವೆಂಪುರವರು ಮಹಾಕಾವ್ಯ ರಚನೆಯ ಸಾಹಸಕ್ಕೆ ಕೈ ಹಾಕಿದರು.

ಹೌದು, ಹಳೆಯ ಕಾವ್ಯವಸ್ತುವೇ ಏಕೆ? ನಿಜವಾಗಿ ನೋಡಿದರೆ ರಾಮಾಯಣ ಹಳೆಯ ಕಥೆ ಅಲ್ಲವೇ ಅಲ್ಲ. ಭಾರತೀಯರ ಚೇತನದ್ರವ್ಯವಾಗಿದ್ದೂ ಪ್ರತಿಸಲವೂ ಹೊಸದಾಗಿಸಿ, ಭಾವಗಳನ್ನು ಮಿಡಿಸುವ ವಸ್ತು ಅದು. ರಾಮ ಕಾಡಿಗೆ ಹೊರಟಾಗ ಕಣ್ಣೀರು ಕರೆಯದವರು ಯಾರು? ರಾವಣ ಸೀತೆಯನ್ನು ಅಪಹರಿಸುವಾಗ ಮನಸ್ಸಿನಲ್ಲಾದರೂ ಅವಳನ್ನು ರಕ್ಷಿಸಲು ಮುನ್ನುಗ್ಗದವರು ಯಾರು? ರಾಮ ಲಕ್ಷ್ಮಣರು ಸೀತೆಯನ್ನು ಹುಡುಕುವಾಗ ಅವರೊಡನೆ ಕಾಡಿನ ಮೂಲೆಮೂಲೆಯನ್ನು ಹುಡುಕಿ ಅಲೆಯದವರು ಯಾರು? ಸೀತೆಯು ಅಗ್ನಿಪ್ರವೇಶ ಮಾಡುವಾಗ ರಾಮನು ಆಡುವ ಮಾತನ್ನು ಕೇಳಿ "ಛಿ, ಅನಾಗರಿಕ, ನೀಚ" ಎಂದು ಬಯ್ಯದವರು ಯಾರು? ರಾಮಲಕ್ಷ್ಮಣ ಸೀತೆಯರು ಅಯೋಧ್ಯೆಗೆ ಹಿಂದಿರುಗಿ ಪಟ್ಟಾಭಿಷೇಕ ನಡೆದಾಗ ಆನಂದಬಾಷ್ಪಗಳನ್ನು ಸುರಿಸದವರು ಯಾರು? ಎಷ್ಟು ಸಲ ಓದಿದರೂ, ಓದುವವನು ನಾಸ್ತಿಕನಾಗಲಿ, ಆಸ್ತಿಕನಾಗಲಿ, ಈ ಅನುಭವಗಳನ್ನು ಪಡೆಯುತ್ತಾನೆ.

ತಮಗೆ ತಿಳಿಯದೆಯೇ ಜನಮನಸ್ಸು ರಾಮಾಯಣದ ಕಥೆಯ ಪರಿಚಯವನ್ನು ಪಡೆದಿದ್ದರ ಪೂರ್ಣ ಪ್ರಯೋಜನವನ್ನು ಕುವೆಂಪು ಪಡೆದರು. ಅವರನ್ನು ಅಂದು ಯಾರಾದರೂ "ನೀವು ರಾಮಾಯಣದ ಕಥೆಯನ್ನು ಆರಿಸಿಕೊಳ್ಳುತ್ತಿರುವುದು ಏಕೆ?" ಎಂದು ಕೇಳಿದ್ದರೆ ಅವರಿಗೆ ಸಮರ್ಪಕವಾದ ಉತ್ತರ ಹೊಳೆಯುತ್ತಿರಲಿಲ್ಲ. ಇಂದೂ ಅವರಲ್ಲಿ ಆ ಪ್ರಶ್ನೆಗೆ ಉತ್ತರ ಇಲ್ಲ. ಇಂಗ್ಲಿಷ್‌ನಲ್ಲಿ ,ಏಥಣಖ , ಜಟಿಜ ಎನ್ನುತ್ತಾರೆ. ನಮ್ಮ ಐದು ಇಂದ್ರಿಯಗಳನ್ನು ಬಿಟ್ಟು ನಮಗೆ ತಿಳಿಯದ, ಆರನೆಯ ಇಂದ್ರಿಯ ಒಂದಿದೆ. ಅದು ಅದ್ಭುತವಾದ ರೀತಿಯಲ್ಲಿ ಕೆಲಸ ಮಾಡುತ್ತದೆ. ಪ್ರತಿಭೆ ವಸ್ತುವನ್ನು ನಿರ್ವಹಿಸುವುದರಲ್ಲಿ ಮಾತ್ರ ಇಲ್ಲ, ಅದನ್ನು ಆರಿಸಿಕೊಳ್ಳುವುದರಲ್ಲೂ ಇದೆ. ಕುವೆಂಪು ತಮ್ಮ ಕಾವ್ಯದಾರಂಭದಲ್ಲಿ ಈ ಪ್ರಶ್ನೆಗೆ ಕೊಡುವ ಉತ್ತರ: "ಶಿಲ್ಪಿ ಕಲೆಯನ್ನು ಸೃಷ್ಟಿಸುತ್ತಾನಲ್ಲದೆ ಶಿಲೆಯನ್ನು ಸೃಷ್ಟಿಸುತ್ತಾನೇನು? ....ಮುಂಚೆ ವಾಲ್ಮೀಕಿ ಹೇಳಿದ ಕಥೆಯೇ ಹೌದು, ಆದರೆ ಕನ್ನಡದಲ್ಲಿ ಹೊಸ ಹುಟ್ಟು ಪಡೆದಂತೆ ಹೇಳುತ್ತೇನೆ." ವಾಲ್ಮೀಕಿಯಲ್ಲಿ ಅವರಿಗೆ ತುಂಬ ಗೌರವ. ಆದ್ದರಿಂದ ತಾವು ವಾಲ್ಮೀಕಿಯ ಕಾವ್ಯವನ್ನು ಉತ್ತಮಪಡಿಸುತ್ತೇನೆ ಎಂಬುದು ಅವರ ಭಾವವಲ್ಲ. ಹೊಸ ದೃಷ್ಟಿಯಿಂದ, ಈ ಯುಗದ ದೃಷ್ಟಿಯಿಂದ ರಚಿಸುತ್ತೇನೆ ಎಂಬುದು ಅವರ ಭಾವ.

ಕುವೆಂಪು ಅವರ ಕಣ್ಣಿನಲ್ಲಿ ರಾಮಾಯಣ ಬರಿಯ ಕಥೆಯಲ್ಲ, ಇತಿಹಾಸವಲ್ಲ, ಅಲೌಕಿಕ ನಿತ್ಯ ಸತ್ಯಗಳನ್ನು ಪ್ರತಿಮಿಸುವ ಸತ್ಯಸ್ಯ ಸತ್ಯ ಘಟನೆ. ಶ್ರೀರಾಮ ಆ ಲೋಕದಿಂದ ಅವತರಿಸಿ ಈ ಲೋಕಕ್ಕೆ ಬಂದು, ಈ ಲೋಕಸಂಭವೆಯಾದ ಸೀತೆಯನ್ನು ವರಿಸುತ್ತಾನೆ. ಆ ನೆವದಿಂದ ಮಣ್ಣು ಶಕ್ತಿಯನ್ನು ಎಂದರೆ ಬರಿಯ ಇಂದ್ರಿಯ ಜಗತ್ತೇ ಸತ್ಯ ಎಂಬುದನ್ನು– ಮರ್ದಿಸಿ ಚೈತನ್ಯದ ಶಕ್ತಿಯನ್ನು, ಎಂದರೆ ಆತ್ಮದ ಶಕ್ತಿಯನ್ನು– ಬೆಳಗುತ್ತಾನೆ.

ಕಥೆ ವಾಲ್ಮೀಕಿ ಮಹರ್ಷಿಗಳು ಹೇಳಿದ ರೀತಿಯಲ್ಲೇ ಮುಂದುವರಿದು ಸಾಗುತ್ತದೆ. ಅಲ್ಲಲ್ಲಿ ಕೆಲವು ಬದಲಾವಣೆಗಳಿವೆ. ಆದರೆ ಅವು ಮೂಲ ಕಥೆಯ ಸ್ವರೂಪಕ್ಕಾಗಲೀ ಉದ್ದೇಶಕ್ಕಾಗಲೀ ಅಪಚಾರವನ್ನು ಮಾಡುವಂಥ ಬದಲಾಣೆಗಳಲ್ಲ. ಅಂತಹ ಬದಲಾವಣೆಗಳಲ್ಲಿ ಒಂದೆರಡನ್ನು ಪರಿಶೀಲಿಸಿದರೆ ವಿಷಯ ಸ್ವಷ್ಟವಾಗುತ್ತದೆ.

ವಾಲ್ಮೀಕಿ ರಾಮಾಯಣದಲ್ಲಿ ಮಂಥರೆಯ ಹಿಂದಿನ ವೃತ್ತಾಂತ ಹೆಚ್ಚಾಗಿ ಸಿಕ್ಕುವುದಿಲ್ಲ. ಅವಳು ಎಲ್ಲರನ್ನೂ ದ್ವೇಷಿಸುವುದು ಏಕೆ ಎಂದು ವಿಚಾರ ಮಾಡುತ್ತಾ ಕುವೆಂಪು ಅವಳು ಕೇಕಯ ರಾಜನಿಗೆ ದೊರಕಿದ ಸಂದರ್ಭವನ್ನು ಸೃಷ್ಟಿಸಿದ್ದಾರೆ. ಬೇಟೆಯಾಡಲು ಕಾಡಿಗೆ ಹೋಗಿದ್ದ ಕೇಕಯ ರಾಜನಿಗೆ ಒಂದು ಮಗುವಿನ ಅಳು ಕೇಳುತ್ತದೆ. ಹತ್ತಿರ ಹೋಗಿ ನೋಡಿದರೆ ಮುಳ್ಳು, ಮಣ್ಣು, ತರಗೆಲೆಯ ಮೇಲೆ ಇರುವೆ ಟುು ಹತ್ತಿ ಮಲಗಿರುವ ಮಗು ಕಾಣುತ್ತದೆ. ರಾಜ ಅದನ್ನು ಎತ್ತಿಕೊಂಡು, ಆ ದಿಕ್ಕಿಲ್ಲದ ಮಗುವನ್ನು ಊರಿಗೆ ತರುತ್ತಾನೆ. ಮಗುವೋ ಕುರೂಪಿ. ಎಲ್ಲರ ತಿರಸ್ಕಾರಕ್ಕೆ ಪಾತ್ರವಾಗುತ್ತದೆ. ಎಲ್ಲರೂ ಅದನ್ನು ನಾಯಿಗಿಂತ ಕೀಳಾಗಿ ಕಾಣುತ್ತಾರೆ. ಪ್ರೀತಿ ವಿಶ್ವಾಸಗಳನ್ನು ಕಾಣದೆ ಬೆಳೆದ ಆಕೆಗೆ ಕೇಕಯ ರಾಜ ಕೈಕೇಯಿಯ ಶುಶ್ರೂಷೆಯ ಕೆಲಸವನ್ನು ವಹಿಸಿದಾಗ ಅವಳಿಗೆ ಮೂರು ಲೋಕವೆ ಸಿಕ್ಕಿದಂತಾಯಿತು. ಅವನ, ಅವನವರ ಬಗೆಗೆ ಪ್ರೀತಿಯೂ, ಉಳಿದವರ ಬಗೆಗೆ ದ್ವೇಷವೂ ಒಂದೇ ಕ್ಷಣದಲ್ಲಿ ಮೂಡಿದುವು. ಅವಳು ರಾಮಾಯಣದ ಘಟನೆಗಳಿಗೆಲ್ಲ ಕಾರಣಳಾದಳು. ಭರತನಿಗೆ ಇವಳ ಮೇಲೆ ಕೋಪ ಬಂದಾಗ, ರಾಮನನ್ನು ಕರೆದು ತರುತ್ತೇನೆ ಎಂದು ಕಾಡಿಗೆ ಓಡಿ ಅಲ್ಲಿ ಬೆಂಕಿಯಲ್ಲಿ ಸಿಕ್ಕಿ ಬೆಂದುಹೋದಳು. ಈ ಕಾವ್ಯದಲ್ಲಿ ಅವಳು ಮತ್ತೊಮ್ಮೆ ಕಾಣಿಸಿಕೊಳ್ಳುತ್ತಾಳೆ, ಸೂಕ್ಷ್ಮ ತನುರೂಪದಿಂದ. ರಾಮನು ಹೇಳಿದ ಸಮಯಕ್ಕೆ ಬಾರದೇ ಹೋದದ್ದರಿಂದ ಭರತ ಅಗ್ನಿ ಪ್ರವೇಶಮಾಡಲು ಸಿದ್ಧನಾಗುತ್ತನೆ. ಆಗ ಒಂದು ಅಶರೀರವಾಣಿ 'ರಾಮ ಬಂದೇ ಬರುತ್ತಾನೆ, ದುಡುಕಬೇಡ" ಎನ್ನುತ್ತದೆ. ಇದು ಯಾರು ಎಂದು ಭರತ ತಲೆ ಎತ್ತಿ ನೋಡುತ್ತಾನೆ. ಆಗ ಆ ವಾಣಿ ಹೇಳುತ್ತದೆ: "ಮತ್ತಾರ್, ಸದಾ ನಿನ್ನ ಸುಕ್ಷೇಮ ಚಿಂತನೆಯೊಳಿರ್ಪ ಆ ಮಂಥರೆಯ ವಿನಾ?" ಭರತನು " ಆ ಹೆಸರನ್ನೇ ಎತ್ತಬೇಡ, ಅಸಹ್ಯವಾಗುತ್ತದೆ" ಎನ್ನುತ್ತಾನೆ. ಆಗ ಆಕೆ ಕೊಡುವ ಉತ್ತರ: "ಮಗೂ, ಅವಳು ಕಾರಣವಲ್ಲ, ಕೇವಲ ಒಂದು ಕರಣ (ಸಾಧನ)" ಇದು ಈ ರಾಮಾಯಣದ ಇಡೀ ಸೂತ್ರಕ್ಕೆ ಅನುಗುಣವಾಗಿದೆ.

ಶಬರಿಯ ಪ್ರಸಂಗದಲ್ಲೂ ಒಂದಿಷ್ಟು ಬದಲಾವಣೆ ನಡೆದಿದೆ. ಬಹಳ ದಿನ ರಾಮನಿಗಾಗಿ ಕಾದಿದ್ದ ಆಕೆಗೆ ರಾಮಲಕ್ಷ್ಮಣರು ಸೀತೆಯಿಲ್ಲದೆ ದುಃಖಿತರಾಗಿ ಬಂದಾಗ ಅವಳಿಗೆ ಅವರ ಗುರುತೇ ಹತ್ತುವುದಿಲ್ಲ. ಕೊನೆಗೊಮ್ಮೆ ನಾಟಕೀಯವಾಗಿ ಅವರ ಗುರುತು ಹತ್ತುತ್ತದೆ. ಅವಳು ರಾಮನಿಗೆ ಶುಶ್ರೂಷೆ ಮಾಡುತ್ತಾ, ಅವನ ದುಃಖ–ಖಾಯಿಲೆಗಳನ್ನು ಸ್ವೀಕರಿಸುತ್ತಾಳೆ. ರಾಮ ಗುಣ ಹೊಂದುತ್ತಾನೆ. ಶಬರಜ್ಜಿ ತನ್ನ ಜೀವವನ್ನು ರಾಮನಿಗಾಗಿ ಅರ್ಪಿಸುತ್ತಾಳೆ.

ಮತ್ತೊಂದು ಮುಖ್ಯವಾದ ಬದಲಾವಣೆ ಸೀತೆಯ ಅಗ್ನಿಪ್ರವೇಶ ಸಂದರ್ಭದ್ದು. ಸೀತೆಯ ಶೀಲದ ವಿಷಯದಲ್ಲಿ ಸಂದೇಹಪಡಬಹುದಾದ ಲೋಕಕ್ಕೆ ರಾಮನ ಶೀಲದ ವಿಷಯದಲ್ಲಿ ಸಂದೇಹ ಮೂಡುವುದೂ ಸಹಜ ತಾನೆ? ಆದ್ದರಿಂದ ಈ ಕಾವ್ಯದ ರಾಮ ಸೀತೆಯ ಹಿಂದೆಯೇ ತಾನೂ ಅಗ್ನಿಪ್ರವೇಶ ಮಾಡಿ ಜಗತ್ತಿಗೆ ತನ್ನ ಶೀಲ ಶುದ್ಧಿಯನ್ನು ತೋರಿಸಿ ಸೀತೆಯೊಡನೆ ಹೊರಬರುತ್ತಾನೆ.

ಈ ಕಾವ್ಯವನ್ನು ಉದ್ದಕ್ಕೂ ಒಂದು ಸೂತ್ರ ಆಳುತ್ತಿದೆ:

**ನೆಯ್ದಾಳುತಿಗೆ ಜಗವನೊಂದತಿ ವಿರಾಣ್ ಮನಂ,**

**ಸೂಕ್ಷ್ಮಾತಿಸೂಕ್ಷ್ಮ ತಂತ್ರದಿ ಬಿಗಿದು ಕಟ್ಟಿಯುಂ**

**ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯ ಭಾವಮಂ**

**ನೀಡಿ, ಮಂಥರೆ ಸೀತೆ ರಾಮ ರಾವಣರೆಲ್ಲರುಂ**

**ಸೂತ್ರಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ?**

ಒಂದು ವಿರಾಟ್ ಮನಸ್ಸು – ಎಂದರೆ ವಿಶ್ವವ್ಯಾಪಿಯೂ ಸರ್ವಶಕ್ತವೂ ಆದ ಮನಸ್ಸು – ಜಗತ್ತನ್ನು ಹಾಸುಹೊಕ್ಕಾಗಿ ನೆಯ್ದು ಆಳುತ್ತಿದೆ. ಅದು ಎಲ್ಲ ಜೀವಿಗಳನ್ನೂ ಸೂಕ್ಷ್ಮಾತಿಸೂಕ್ಷ್ಮವಾದ ತಂತ್ರದಿಂದ ಬಿಗಿದು ಕಟ್ಟಿದೆ. ಜೀವಿಗಳು ಸ್ವತಂತ್ರರಲ್ಲ; ಆದರೂ ಅವರು ಸ್ವತಂತ್ರರು ಎಂಬ ಭಾವನೆಯನ್ನು ಆ ವಿರಾಟ್ ಮನಸ್ಸು ನೀಡಿದೆ, ಅವರಿಗೆ (ಗೂಟಕ್ಕೆ ಉದ್ದವಾದ ಹಗ್ಗದಿಂದ ಕಟ್ಟಿದ ಹಸುವಿನಂತೆ ಅದು, ಆ ಪರಿಧಿಯಲ್ಲಿ ಸುತ್ತುವಷ್ಟರ ಮಟ್ಟಿಗೆ ಸ್ವತಂತ್ರ. ಅದರಾಚೆಗೆ ಹೋಗಲಾರದು). ಮಂಥರೆಯಾಯಿತು, ಸೀತೆ ರಾಮ ರಾವಣ ಯಾರೇ ಆಗಲಿ ಆ ವಿಧಿಯ (ವಿರಾಟ್ ಮನಸ್ಸಿನ) ಹಸ್ತದಲ್ಲಿ ಸೂತ್ರದ ಗೊಂಬೆಗಳು. ಅದು ಕುಣಿಸಿದಂತೆ ಅವರು ಕುಣಿಯಲೇ ಬೇಕು.

ಎರಡನೆಯ ಅಂಶ: ಪ್ರತಿಯೊಬ್ಬರಿಗೂ – ಅವನು ರಾವಣನೇ ಆಗಲಿ – ಉದ್ಧಾರವಿದ್ದೇ ಇದೆ. ಎಲ್ಲ ಪಾತ್ರಗಳೂ ಉದ್ಧಾರದ ಕಡೆಗೆ – ಅಂತಿಮವಾಗಿ ಆತ್ಮಸಾಕ್ಷಾತ್ಕಾರದ ಕಡೆಗೆ – ಯಾತ್ರೆ ಹೊರಟ್ಟಿದ್ದಾರೆ. ಇದಕ್ಕೆ ನಿದರ್ಶನವಾಗಿ ರಾವಣನ ಪಾತ್ರವನ್ನು ನೋಡೋಣ.

ಇಲ್ಲಿಯ ರಾವಣನೂ ಮೂಲ ರಾಮಾಯಣದ ರಾವಣನಂತೆ ಮಹಾ ಪರಾಕ್ರಮಿ, ಕಾಮಿ. ಅನೇಕ ಸ್ತ್ರೀಯರು ಅವನ ವೈಭವಕ್ಕೆ, ಶಕ್ತಿಗೆ ಮಾರುಹೋದಂತೆ ಸೀತೆಯೂ ತನ್ನ ವಶಳಾಗುತ್ತಾಳೆ ಎಂಬುದೇ ಅವನ ಭಾವನೆ. ಸೀತೆ ತಿರಸ್ಕರಿಸಿದಷ್ಟೂ ಅವಳ ವಿಷಯಕ್ಕೆ ಅವನ ಮೋಹ ಹೆಚ್ಚುತ್ತಾ ಹೋಗುತ್ತದೆ. ಆದರೆ ಮಂಡೋದರಿ, ವಿಭೀಷಣ, ಅವನ ಮಗಳು ಅನಲೆ– ಈ ಎಲ್ಲರ ಸಾತ್ವಿಕ ಶಕ್ತಿ, ಪ್ರಾರ್ಥನೆಗಳಿಂದ ಅವನ ಮನಸ್ಸು ಕಾಮದಿಂದ ಮಂಗಳದ ಕಡೆಗೆ ಹರಿಯುತ್ತದೆ. ಸೀತೆಯನ್ನು ಅತಿಯಾಗಿ ಕಾಮಿಸಿದ ರಾವಣನೇ ಸೀತೆಯನ್ನು ಕುರಿತು ಕೊನೆಗೆ ಹೇಳುತ್ತಾನೆ:

**ನನಗೆ ದೇವತೆ, ಮಾತೆ ! ಶ್ರದ್ಧೆಗೆಟ್ಟಿರ್ದೆನಗೆ**

**ಶ್ರದ್ಧೆಯಂ ಮರುಕೊಳಿಸುತ್ತಾತ್ಮದುದ್ಧಾರಮಂ**

**ತಂದ ದೇವತೆ, ಪುಣ್ಯಮಾತೆ!**

ಈ ಕಾವ್ಯದ ರಾವಣ ದೊಡ್ಡ ಸಾಧಕ. ಸೀತೆ ತನ್ನನ್ನು ಗೆದ್ದಳು, ಆದ್ದರಿಂದ ರಾಮನನ್ನು ಗೆದ್ದು ಅವನನ್ನು ಸೀತೆಗೆ ಕಾಣಿಕೆಯಾಗಿ ಕೊಡುತ್ತೇನೆ ಎಂಬುದು ಅವನ ಪ್ರತಿಜ್ಞೆ, ಆದರೆ ಅವನ ರಾವಣತ್ವ ಸವೆದು ಕಳೆಯದೆ ರಾಮತ್ವ ಸಿದ್ಧಿಸುವ ಹಾಗಿಲ್ಲ. ಅದಕ್ಕಾಗಿಯೆ ಅವನು ಪಾಡುಪಟ್ಟದ್ದು, ಇತರರನ್ನೂ ಪಾಡುಪಡಿಸಿದ್ದು. ಎಂತಹ ಕಷ್ಟ ದಃಖಗಳ ಪರಂಪರೆ ಅವನಿಗೂ, ರಾಮ ಸೀತೆ ಲಕ್ಷಣ ಮುಂತಾದವರಿಗೂ ಒದಗಿತು. ಮಗ ಇಂದ್ರಜಿತು ಸತ್ತಾಗ ಸೊಸೆ ತಾರಾಕ್ಷಿ ಅವನ ಕಾಲ ಮೇಲೆ ದಿಂಡುರುತ್ತಾಳೆ. ಆಗ ಕವಿ ವರ್ಣಿಸುತ್ತಾರೆ: "ಬಾಲೆಯಂ ಮೇಲೆತ್ತವೋಗಿ, ಕುಸಿದನು ತಾನೆ ನೆಲಕೆ ಕೈಲಾಸಮಂ ನೆಗಹಲಲುಗಿಸಿದ ಬಾಹುಭೀಮಂ." ಯುದ್ಧ ಮುಂದುವರಿಯುತ್ತದೆ. ಸೀತೆ ಈ ವೇಳೆಗೆ ಅವನಿಗೆ ತಾಯಿಯಂತೆ

ತೋರುತ್ತಿದ್ದಾಳೆ. ದೇವಿ ಅಂಬಿಕೆ ರಾವಣನಿಗೆ ಕರುಣಿಸಿದ ದರ್ಶನದಲ್ಲಿ ಆತ ಕಾಣುತ್ತಾನೆ – ಮರುಜನ್ಮದಲ್ಲಿ ಅವನೂ ಕುಂಭಕರ್ಣನೂ ಅವಳಿ ಮಕ್ಕಳಾಗಿ ಸೀತೆಯಿಂದ ವಾತ್ಸಲ್ಯವನ್ನು ಪಡೆಯುವುದನ್ನು. ಸೀತೆ ಅವರನ್ನು ಎತ್ತಿ ಮುದ್ದಾಡುತ್ತಾಳೆ. ಹಾಡಿ ಮೊಲೆಯೂಡುತ್ತಾಳೆ. ತೊಡೆಯೇರಿಸಿಕೊಂಡು ಎದೆಗೆ ಅಪ್ಪಿಕೊಳ್ಳುತ್ತಾಳೆ. ಇದು ರಾಣನಿಗಾದ ಸ್ವಪ್ನ ದರ್ಶನ.

ವಾಸ್ತವ ಮುಂದುವರಿಯುತ್ತದೆ. ಘೋರ ಯುದ್ಧವಾಗುತ್ತದೆ. ರಾಮನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತಾನೆ. ರಾವಣ ತನ್ನ ಹೃದಯವನ್ನು ಹೊಕ್ಕ ಅಸ್ತ್ರವನ್ನು ರಾಮನೆಂದೇ ನಂಬಿ ಭದ್ರವಾಗಿ ಹಿಡಿದುಕೊಳ್ಳುತ್ತಾನೆ. 'ಸೆರೆ ಸಿಕ್ಕಿದನಲಾ ಶತ್ರು !' ಎಂದು ಉದ್ಗರಿಸುತ್ತಾನೆ. ಅಷ್ಟೇ ಅಲ್ಲ, ಸಾರಿಥಿಗೆ ಅಪ್ಪಣೆ ಮಾಡುತ್ತಾನೆ: "ವೈರಿ ಸೆರೆಸಿಕ್ಕಿದ್ದಾನೆ, ರಥವನ್ನು ಊರಿಗೆ ಹಿಂದಿರುಗಿಸು." ಊರಿಗೆ ಹಿಂದಿರುಗಿ ತನ್ನ ಸತಿ ಮಂಡೋದರಿಗೆ ಹೇಳುತ್ತಾನೆ: "ಇದೋ ಈ ಕಪ್ಪವನ್ನು ಸೀತಾ ಮಾತೆಗೆ ಕಾಣಿಕೆಯಾಗಿ ಕೊಡು."

ಶ್ರೀ ರಾಮಾಯಣ ದರ್ಶನಂ ಕಾವ್ಯದ ಉದ್ದಕ್ಕೂ ಎದ್ದು ಕಾಣುವ 'ಕ್ರಿಯಾಶಕ್ತಿ' ಭಗವತ್‌ಕೃಪೆ, ಭಗವದಿಚ್ಛೆ. ಅದೇ ವಿಧಿಶಕ್ತಿಯೂ ಹೌದು. ಇದನ್ನೆ ಕೆಲವು ನಿದರ್ಶನಗಳಲ್ಲಿ ನೋಡಬಹುದು. ಜಟಾಯುವಿನ ಅಣ್ಣ ಸಂಪಾತಿ. ಒಮ್ಮೆ ಆಕಾಶದಲ್ಲಿ ಭಾರೀ ಸರ್ಪವೊಂದನ್ನು ಕಚ್ಚಿಕೊಂಡು ಹಾರುತ್ತಿದ್ದಾಗ ಆ ಹಾವು ಕಚ್ಚಿದ್ದ ತಿಮಿಂಗಲ ಕೆಳಗೆ ಬಿದ್ದು ನಿಶಾಕರ ಮುನಿ ಮಾತ್ರ ಉಳಿದುಕೊಂಡ, ಹೊರಗೆ ಹೋಗಿದ್ದುದರಿಂದ. ಋಷಿ ಶಪಿಸುವುದಿಲ್ಲ. ಬದಲಿಗೆ ನಿನ್ನಿಂದ ಮಹತ್ಕಾರ್ಯವಾಗುತ್ತದೆ. ಆದರೂ ಕರ್ಮ ಪರಿಪಾಕಕ್ಕಾಗಿ ಕಾಯಲೇಬೇಕು ಎನ್ನುತ್ತಾನೆ. ಮತ್ತೊಮ್ಮೆ ಸಂಪಾತಿ ಹಾರುತ್ತಾ ಸೂರ್ಯನನ್ನು ಸಮೀಪಿಸಿದ ತಮ್ಮ ಜಟಾಯುವನ್ನು ತನ್ನ ರೆಕ್ಕೆಗಳಿಂದ ರಕ್ಷಿಸುತ್ತಾನೆ. ಆದರೆ ತನ್ನ ರೆಕ್ಕೆಗಳು ಸೀದು ಹೋಗಿ ಮಹೇಂದ್ರಾಚಲದ ಕೋಡುಗಲ್ಲಿನ ಮೇಲೆ ಧೊಪ್ಪನೆ ಉರುಳುತ್ತಾನೆ. ಕಪಿಸೈನ್ಯ ಸೀತೆಯನ್ನು ಹುಡುಕುತ್ತಾ ಮಹೇಂದ್ರಾಚಲದವರೆಗೆ ಬರುವವರೆಗೂ ನರಳುತ್ತಾ ಶೋಕಮೋಕ್ಷಕ್ಕಾಗಿ ಕಾಯುತ್ತಿರುತ್ತಾನೆ. ಅವನಿಗೆ ಕಪಿಸೇನೆಯ ಶರಗುಲ್ಮ ಹೇಳುವ ಮಾತು:

**ಮಾಣ್ಬುದು ನಿರಾಶೆಯಂ, ಹೇ**

**ವಿಹಂಗಮ ತಪಸ್ವಿ, ದೈವಕೃಪೆಗೇ ಕ್ಲೇಶಮುಂ**

**ರೆಂಕೆಯಪ್ಪುದು! ಶಂಕೆಯೇಕೆ – ಶಿವಕೃಪೆಗೆ**

**ತೃಣವೆ ಖಡ್ಗಂ; ಪನಿ ಕಡಲ್, ಕಿಡಿ ಸಿಡಿಲ್, ಶ್ರದ್ಧೆ**

**ಸಾಣೆಯಿರೆ ತಾಳ್ಮೆಯೆ ತಪಂ....ನಿಶ್ಶಬ್ದಿಯೈ ಈಶ್ವರ ಕೃಪಾಬ್ಧಿ.**

**ಬರ್ಪುದನರಿಯಲಾರೆವಂತೆಯೆ ಮಹತ್ಕೃತಿ ತಾಂ**

**ಮಹನ್ ಮೌನಿ.**

ದಶರಥನು ಕೈಕೆಗೆ ಹಿಂದೆ ಕೊಟ್ಟಿದ್ದ ಮಾತನ್ನು ಆತನಿಗೆ ನೆನಪು ಮಾಡಿ ವರ ಬೇಡುವ ಸಂದರ್ಭ. ಆಗ ವರ ನೀಡಿ ರಾಮನನ್ನು ಕಾಡಿಗೆ ಕಳುಹಿಸಲು ಗುಪ್ತವಾಗಿದ್ದ ಕಾರಣ:

**ಕಬಂಧನ ಮೊರೆಯೊ?**

**ಶಬರಿಯ ಕರೆಯೊ? ರಾಮನಾತ್ಮಾಭಿಲಾಷಿತಮೊ?**

**ಪಾತ್ರಂಗಳಂತರಾಳದಿ ತನ್ನ ಸೂತ್ರಂಗಳಂ**

**ನಡೆಯಿಪಂತರ್ಯಾಮಿ ಶಕ್ತಿಯ ವಿಲಾಸಿತಮೊ?**

ಮುದ್ದು ಮಗನಾದ ರಾಮಚಂದ್ರ ಕಾಡಿಗೆ ಹೋಗುವುದು ಅನಿವಾರ್ಯವಾದಾಗ ತಾಯಿ ಹೇಳುವ ಮಾತು:

**......ಜೈಸುಗೆ ವಿಧಿಯ ವಜ್ರೇಚ್ಛೆ !**

**ಗೆಲ್ಗೆ ನಿರುತಂ ಋತಂ ! ಜಗದೀಶ ಕೃಪೆಯೆನಗೆ**

**ದಯೆಗೆಯ್ಗೆ ! ಗೆಲವಕ್ಕೆ ದೇವರ್ಕಳೆಲ್ಲರ್ಗೆ !**

**ಜಯಮಕ್ಕೆ ಮಾತೃವೊಲ್ಮೆಯ ಮಹತ್ ಪ್ರಾರ್ಥನೆಗೆ !**

ಈ ಯುಗಧರ್ಮವಾದ ಅಹಿಂಸೆಯ ದಾರಿ, ವಿಜ್ಞಾನವು ತೆರೆದ ವಿವಿಧ ಹೊಸ ಲೋಕಗಳು ನಾನಾ ರೂಪದಿಂದ ಈ ಕಾವ್ಯದಲ್ಲಿ ಮೈಗೂಡಿವೆ. ಪುತ್ರಸಂತಾನವಾಗಬೇಕೆಂದು ದಶರಥ ಮಹಾರಾಜ ಪುತ್ರಕಾಮೇಷ್ಠಿ ಯಾಗವನ್ನು ಮಾಡಲು ಬಯಸಿದಾಗ ಜಾಬಾಲಿ ಋಷಿವರೇಣ್ಯರು ರಾಜನಿಗೆ ಹೇಳಿದ್ದು ಹೀಗೆ:

**ಕುಲಪುರೋಹಿತರೊರೆದ ಜನ್ನಮಂ ಕೈಕೊಂಡು**

**ಪಸುಳೆ ರನ್ನರ ಪಡೆವೆಯದು ದಿಟಂ; ಕೇಳಾದೊಡಂ**

**ನನ್ನೊಂದು ಕಾಣ್ಕೆಯಂ. ಪೂರ್ವ ಪದ್ಧತಿವಿಡಿದು**

**ಮಾಳ್ಪ ದಿಗ್ವಿಜಯ ಹಯಮೇಧ ಮೊದಲಾದುವಂ**

**ತೊರೆದು, ಹಿಂಸಾ ಕ್ರೌರ್ಯಮಿಲ್ಲದಿಹ ಪ್ರೇಮಕ್ಕೆ**

**ನೋಂತು, ದೇವರ್ಕಳಂ ಪೂಜಿಸಲ್ ಮೆಚ್ಚುವುದು**

**ಜಗವನಾಳುವ ಋತಂ....**

ಸರಯೂ ತರಂಗಿಣಿಯ ಪಚ್ಚೆಯ ಹಸುರು ದಡದ ಮೇಲೆ ಸಿದ್ಧಪಡಿಸಿದ ಯಜ್ಞಕುಂಡದ ವರ್ಣನೆ ಹೀಗಿದೆ:

**ದೂರದರ್ಶಕ ಯಂತ್ರದಕ್ಷಿಯೊಳ್ ಕಣ್ಣಿಟ್ಟು**

**ಗಗನ ವಿಜ್ಞಾನಿ ತಾಂ ರಾತ್ರಿಯಾಕಾಶದಲಿ**

**ಕಾಣ್ಬೊಂದು ತಾರಾಗರ್ಭದಂತೆ.**

ಹೀಗೆ ಆಧುನಿಕ ವಿಜ್ಞಾನವೂ ಈ ಉಪಮಾಸೃಷ್ಟಿಯಲ್ಲಿ ಕವಿಯ ನೆರವಿಗೆ ಬಂದಿದೆ. ಅಯೋಧ್ಯೆಯ ವರ್ಣನೆಯನ್ನು ಮಾಡುತ್ತಾ ಕವಿ ಕುವೆಂಪು ನಿಜವಾದ ಸಂಸ್ಕೃತಿ ಎಂದರೇನು ಎಂಬುದನ್ನು ಸೊಗಸಾಗಿ ತೋರಿಸಿಕೊಟ್ಟಿದ್ದಾರೆ. ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ ಅತ್ಯಂತ ಮನನೀಯವಾದ ಭಾಗಗಳಲ್ಲಿ ಒಂದು, ಈ ಮುಂದಿನದು:

**ಹಾ ! ಭಾಗ್ಯಹೀನ ದೀನ ಅಯೋಧ್ಯೆ,**

**ನಿನಗುಂ ಅರಣ್ಯಗತಿಯಾಯ್ತಲಾ ರಾಮನಾ**

**ವನವಾಸದಿಂ, ದಶರಥನ ನಿಧನದಿಂ ಮೇಣ್**

**ಭರತನಾ ಪರಿತ್ಯಾಗದಿಂ ! ಶ್ರೇಷ್ಠರಿಲ್ಲದಿರೆ,**

**ಏನಿರ್ದರೇನಂತೆ, ಮಸಣಮಾ ಪತ್ತನಂ**

ತತ್ವ ವಿದ್ಯಾ ಕಲಾ ಸಂಗೀತ ಸಾಹಿತ್ಯ

ಸಕಲ ಸಂಸ್ಕೃತಿಗೆ. ಬಿತ್ತರದ ಬೀದಿಗಳೆರಡು

ಕೆಲದಿ ಮುಗಿಲಂ ಮುಟ್ಟಿ ಮೆರೆದೊಡೇಂ ಸ್ಪರ್ಧೆಯಾ

ಪ್ರಾಸಾದ ಪಂಕ್ತಿ? ರಂಜಿಸಿದೊಡೇಂ ರಜನಿಯಂ

ಪಗಲುಗೈದಾಗಸದ ಚುಕ್ಕಿಗಳನೇಳಿಸುತೆ

ಕಿಕ್ಕಿರಿದು ಕಣ್ಬೆರಗುಗೊಳಿಸಿ ಗೊಂಚಲ್ಗೊಂಡು

ಉರಿವ ವಿದ್ಯುದ್ದೀಪ ರಾಜಿ? ಬಣ್ಣದ ಬುಗ್ಗೆ

ಕಣ್ಗೆ ಕಾಮನ ಬಿಲ್ಗಳಂಗನೆಯರಾಟವೆನೆ

ಸಾಲ್ಗೊಂಡು ವಿವಿಧ ಗತಿಯಾ ಕಲಾಕೃತಿಯಿಂದೆ

ರಂಗುರಂಗಿನ ತೋಂಟರಂಗದಿ ಮನಂಗೊಳಿಸಿ

ಕುಣಿದೊಡೇಂ? ಪ್ರಾಸಛಂದಃಪೂರ್ಣಮಪ್ಪುದೇಂ

ಪುರುಷಾರ್ಥ ಶಾಶ್ವತದ ರಾಸಲೀಲಾ ಬೃಂದ?

ಜನಮನೋಮಂದಿರದ ಸುಸ್ವಪ್ನ ಗೋಪುರದ

ಕಲಶಂ ನಭಶ್ಚುಂಬಿಯಾಗದಿರೆ, ಋಷಿಹೃದಯ

ಮಂಗಳಾರತಿ ಬಾಳಿನಂಧತೆಯನಳಿಸದಿರೆ,

ಕವಿಕೃತಿಯ ವರ್ಣಗಾನಂ ಮಹನ್ನಿತ್ಯತಾ

ಸ್ವರ್ಣಸುಂದರ ಇಂದ್ರಿಯಾತೀತ ನಂದನದಿ

ನವರಸಾಪ್ಸರಿಯರಂ ನರ್ತನಂಗೈಸದಿರೆ, ಪೇಳ್,

ಏನಿರ್ದುಮೇನ್ ಅನಾಗರಿಕತಾ ಶ್ರೀ, ದಿಟಂ

ಮಸಣಮಾ ಪತ್ತನಮಯೋಧ್ಯೆ ತಾನಾದೊಡಂ !

"ಭಾಗ್ಯಹೀನ ದೀನ ಅಯೋಧ್ಯೆಯೆ, ರಾಮನ ವನವಾಸದಿಂದಲೂ ದಶರಥನ ಮರಣದಿಂದಲೂ, ಭರತನು ಊರುಬಿಟ್ಟು ಹೋಗಿರುವುದರಿಂದಲೂ ನೀನೂ ಕಾಡುಪಾಲಾದೆಯಲ್ಲ ! ಏನಿದ್ದರೆ ತಾನೆ ಏನು, ಶ್ರೇಷ್ಠರಾದವರು ಇಲ್ಲದಿದರೆ ಸಂಸ್ಕೃತಿಗೆ ಸಂಬಂಧಪಟ್ಟ ತತ್ವ, ವಿದ್ಯೆ, ಕಲೆ, ಸಾಹಿತ್ಯ ಈ ಎಲ್ಲವೂ ಟತು ಶ್ಮಶಾನವಾದಂತೆಯೇ ಸರಿ. ವಿಸ್ತಾರವಾದ ಬೀದಿಯ ಎರಡು ಪಕ್ಕಗಳಲ್ಲೂ ಒಂದರೊಡನೊಂದು ಸ್ಪರ್ಧಿಸುತ್ತಾ ಎತ್ತರದ ಕಟ್ಟಡಗಳು ಮುಗಿಲನ್ನು ಮುಟ್ಟುತ್ತಾ ಮೆರೆದರೆ ತಾನೆ ಏನು? ಆಕಾಶದ ನಕ್ಷತ್ರಗಳನ್ನು ಮೀರಿಸುತ್ತಾ ಕಿಕ್ಕಿರಿದು, ಕಣ್ಣುಗಳನ್ನು ಬೆರಗುಗೊಳಿಸಿ ವಿದ್ಯುದ್ದೀಪಗಳು ಗೊಂಚಲು ಗೊಂಚಲಾಗಿ ಉರಿಯುತ್ತಾ ರಾತ್ರಿಯನ್ನೇ ಹಗಲಾಗಿಸಿ, ರಂಜಿಸಿದರೆ ತಾನೆ ಏನು? ಬಣ್ಣ ಬಣ್ಣದ (ನೀರಿನ) ಬುಗ್ಗೆಗಳು ಕಾಮನಬಿಲ್ಲುಗಳಂತಹ ಸ್ತ್ರೀಯರ ನೃತ್ಯವೋ ಎಂಬಂತೆ ರಂಗುರಂಗಿನ ತೋಟಗಳ ರಂಗದಲ್ಲಿ ಮೋಹಕವಾಗಿ ಕುಣಿದರೆ ತಾನೆ ಏನು? ಪರಮಪುರುಷಾರ್ಥದ ರಾಸಲೀಲಾ ಬೃಂದಾವನವು ಪ್ರಾಸ ಛಂದಸ್ಸು ಇವುಗಳಿಂದ ಪೂರ್ಣವಾಗುತ್ತದೆಯೆ? ಜನಗಳ ಮನಸ್ಸಿನ ಮಂದಿರದ ಸುಸ್ವಪ್ನಗಳ ಗೋಪುರದ ಕಲಶವು ಮುಗಿಲನ್ನು ಮುಟ್ಟದಿದ್ದರೆ (ಎಂದರೆ ಮಾನವ ಮನಸ್ಸು ಉನ್ನತೋನ್ನತವಾದ ಆದರ್ಶಗಳ ಕಡೆಗೆ ಏರದಿದ್ದರೆ), ಋಷಿಗಳ ಹೃದಯದ

ಮಂಗಳಾರತಿಯು (ಎಂದರೆ ತಪಸ್ವಿಗಳು ತಮ್ಮ ಅಂತರಂಗದಲ್ಲಿ ಕಂಡ ಬೆಳಕು) ಬಾಳಿನ ಕುರುಡನ್ನು ಹೋಗಲಾಡಿಸದಿದ್ದರೆ, ಕವಿಗಳ ಕಾವ್ಯದ ವರ್ಣಮಯವಾದ ಗಾನವು ಇಂದ್ರಿಯಾತೀತವಾದ (ಅಧ್ಯಾತ್ಮದ) ನಂದನವನದಲ್ಲಿ ನವರಸಗಳೆಂಬ ಅಪ್ಸರೆಯರು ನರ್ತನ ಮಾಡುವಂತೆ ಮಾಡದಿದ್ದರೆ, ಏನಿದ್ದರೆ ತಾನೆ ಏನು, ಆ ಪಟ್ಟಣವು ಅಯೋಧ್ಯೆಯೆ ಆದರೂ ಅದು ಅನಾಗರಿಕತೆಗೆ ಆಶ್ರಯವೇ ಹೊರತು ಬೇರೇನೂ ಅಲ್ಲ!"

ಶ್ರೀ ಕುವೆಂಪು ಉನ್ನತವಾದ ಆದರ್ಶಗಳ ಆರಾಧಕರು. ಕಾವ್ಯವೂ, ಇತರ ಕಲೆಗಳೂ ನಮ್ಮ ಮನಸ್ಸನ್ನು ಎತ್ತರದ ಸ್ತರಗಳಿಗೆ ಏರಿಸಬೇಕು ಎಂಬುದು ಅವರ ತೀವ್ರವಾದ ಕಳಕಳಿ. ಅದನ್ನು ತಮ್ಮ ಈ ಕಾವ್ಯಭಾಗದಲ್ಲಿ, ರಾಮಭರತರಿಲ್ಲದ ಅಯೋಧ್ಯೆಯನ್ನು ನೆಪವಾಗಿಟ್ಟುಕೊಂಡು ಹೀಗೆ ನಿರೂಪಿಸಿದ್ದಾರೆ. ಅಂಥ ಅಯೋಧ್ಯೆಯನ್ನು ಭರತ ಹೇಗೆ ತಾನೆ ಪ್ರವೇಶಿಸಿಯಾನು? ಏಕೆಂದರೆ ಈಗ ಅದು ಪ್ರೇತವನ, ಎಂದರೆ ಶ್ಮಶಾನ. ಅವನು "ಪೂಜ್ಯ ಪಾದುಕಾಚೇತನ" ಎಂದರೆ ರಾಮನ ಪಾದುಕೆಗಳು ಅವನ ಜೀವದ ಜೀವವಾಗಿವೆ. ಆದುದರಿಂದ ಹಾಳು ಮುಸುಕಿದ, ಕೆಟ್ಟ ನೆನಪಿನ ಆ ಊರಿಗೆ ತನ್ನ ಬೆನ್ನನ್ನು ತಿರುಗಿಸಿ, ಹತ್ತಿರದ ನಂದಿಗ್ರಾಮಕ್ಕೆ ಬಂದು, ಪಾದುಕೆಗಳಿಗೆ ಅಭಿಷೇಕ ಮಾಡಿ, ಅವುಗಳನ್ನೇ ತನ್ನ ಅಣ್ಣ ರಾಮ ಎಂದು ಭಾವಿಸಿ, ರಾಜ್ಯಭಾರವ್ರತದಲ್ಲಿ ನಿಂತ. ನಿರಂತರವೂ ಅವನ ಚೇತನಕ್ಕೆ ಶ್ರೀರಾಮನ ಕ್ಷೇಮವೊಂದೇ ಪ್ರಾರ್ಥನೆಯಾಗಿ ಪರಿಣಮಿಸಿತು.

ಹೀಗೆ ಶ್ರೀರಾಮಾಯಣ ದರ್ಶನದ ಒಂದೊಂದು ಪಾತ್ರವೂ, ಒಂದೊಂದು ವರ್ಣನೆಯೂ ವಿಶಿಷ್ಟ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. 'ಶ್ರೀರಾಮಾಯ ದರ್ಶನಂ' ಕಾವ್ಯ ಒಂದು ಅದ್ಭುತ ಸಿದ್ಧಿ. ತನ್ನನ್ನು ರಚಿಸಿದ ಕವಿಯನ್ನು ಮಾತ್ರವಲ್ಲದೆ ಕನ್ನಡವನ್ನು ವಿಶ್ವ ಸಾಹಿತ್ಯದ ಉನ್ನತ ವೇದಿಕೆಯಲ್ಲಿ ಸ್ಥಾಪಿಸಿದ ಕೃತಿ. * * * * *

**ಪರಾಮರ್ಶನ ಗ್ರಂಥಗಳು**


1. ಕುವೆಂಪು – ಶ್ರೀರಾಮಯಣ ದರ್ಶನಂ
2. ಡಾ. ಸಿ.ನಾಗಭೂಷಣ – ಕುವೆಂಪು ದರ್ಶನ ಸಂದರ್ಶನ
3. ಪ್ರಧಾನ ಗುರುದತ್ತ – ಕುವೆಂಪು ಸಂಚಯ
4. ಸುಜನಾ – ಪರಂಪರೆ ಮತ್ತು ಕುವೆಂಪು
5. ಗಂಗೋತ್ರಿ – ಕುವೆಂಪು ಅಭಿನಂದನ ಗ್ರಂಥ, ಕುವೆಂಪು ಅಭಿನಂದನ ಸಮಿತಿ ಅವರ ಪರವಾಗಿ


IJCRT